ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 204/2017

(ಫ್ರಾಸಾ-7 ಚಾಸಾ-14)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 03.12.2025.

| | | |
|---|---|---|
| ಸಾಕ್ಷಿದಾರರ ಹೆಸರು | - | ಟಿ. ಕೋನಪ್ಪ ರೆಡ್ಡಿ |
| ತಂದೆಯ ಹೆಸರು | - | ಲೇಟ್ ತಿಪ್ಪಾರೆಡ್ಡಿ |
| ವಯಸ್ಸು | - | 67 ವರ್ಷ, |
| ಉದ್ಯೋಗ | - | ನಿವೃತ್ತ ಡಿವೈಎಸ್ಪಿ |
| ವಾಸ | - | ಬೆಂಗಳೂರು |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನಾನು ದಿಃ23.04.2014 ರಿಂದ ದಿಃ31.07.2016 ರವರೆಗೆ ದೊಡ್ಡಬಳ್ಳಾಪುರ ಉಪವಿಭಾಗದ ಡಿವೈಎಸ್ಪಿ ಆಗಿ ಕಾರ್ಯನಿರ್ವಹಿಸುತ್ತಿದ್ದೆನು. ರಾಜಾನುಕುಂಟೆ ಪೋಲಿಸ್ ಠಾಣೆ ದೊಡ್ಡಬಳ್ಳಾಪುರ ಉಪವಿಭಾಗದಲ್ಲಿ ಬರುತ್ತಿತ್ತು. ದಿಃ25.07.2016 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಕಡತದೊಂದಿಗೆ ಚಾಸಾ-13 ಇವರಿಂದ ಎಸ್ ಪಿ, ಬೆಂಗಳೂರು, ಇವರ ಆದೇಶದ ಮೇರೆಗೆ ವಹಿಸಿಕೊಂಡು ಕಡತವನ್ನು ಪರಿಶೀಲಿಸಿರುತ್ತೇನೆ. ಸದರಿ ಎಸ್ಪಿ ಆದೇಶದ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು ಮತ್ತು ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರ್ತಿಸಲಾಯಿತು.

2. ಅದೇ ದಿನ ತನಿಖೆ ಮುಂದುವರಿಸಿ ಕೃತ್ಯ ನಡೆದ ಸ್ಥಳವಾದ ಶ್ರೀರಾಮನಹಳ್ಳಿ ಗ್ರಾಮದ ಸರ್ವೆ ನಂಬರ್ 45/2 ಕ್ಕೆ ಭೇಟಿ ನೀಡಿದ್ದು ಚಾಸಾ-4 ರವರು ಸ್ಥಳದಲ್ಲಿ ಹಾಜರಿದ್ದು ಕೃತ್ಯ ನಡೆದ ಸ್ಥಳವನ್ನು ತೋರಿಸಲಾಗಿದ ಸ್ಥಳದಲ್ಲಿ ಚಾಸಾ-6 ಮತ್ತು 7 ರವರ ಪಂಚರ ಸಮಕ್ಷಮ ಸಂಜೆ 04.00 ರಿಂದ 05.00 ಘಂಟೆಯವರೆಗೆ ಮಹಜರ್ ಜರುಗಿಸಿರುತ್ತೇನೆ. ಈಗ ನಾನು ನಿಪಿ-2 ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದರಲ್ಲಿ ಸಾಕ್ಷಿ ತಮ್ಮ ಸಹಿ ನೋಡಿ ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರ್ತಿಸಲಾಯಿತು. ಆ

ಕಾಲಕ್ಕೆ ಘಟನೆಯ ಮೂರು ದೊಣ್ಣೆಗಳು ಬಿದ್ದಿದ್ದನ್ನು ಚಾಸಾ-4 ರವರು ತೋರಿಸಿ ಹಾಜರು ಮಾಡಿದ ಮೇರೆಗೆ ಅವುಗಳನ್ನು ಅಮಾನತುಪಡಿಸಿಕೊಂಡು ಪಂಚನಾಮೆ ಕ್ರಮ ಜರುಗಿಸಿರುತ್ತೇನೆ. ಠಾಣೆಗೆ ವಾಪಸ್ಸಾಗಿ ಸದರಿ ದೊಣ್ಣೆಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 79/16 ರಲ್ಲಿ ಅಳವಡಿಸಿರುತ್ತೇನೆ. ಸಾಕ್ಷಿ ಮು.ಮಾ-1 ರಿಂದ 3 ದೊಣ್ಣೆಗಳನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತಾರೆ. ಸ್ಥಳಕ್ಕೆ ನಾನು ಭೇಟಿ ನೀಡಿದಾಗ ಜಮೀನು ಉಳುಮೆ ಮಾಡಿರುವುದು ಕಂಬಂದಿತ್ತು.

3. ಅದೇ ದಿನ ಚಾಸಾ-13 ರವರಿಗೆ ಆರೋಪಿತರನ್ನು ಪತ್ತೆ ಮಾಡಿ ಹಾಜರುಪಡಿಸುವಂತೆ ಸೂಚನೆ ನೀಡಿರುತ್ತೇನೆ. ದಿಃ28.07.2016 ರಂದು ವೈದ್ಯರು, ರಾಮಕೃಷ್ಣ ಆಸ್ಪತ್ರೆ, ಬೆಂಗಳೂರು, ಇವರಿಗೆ ಚಾಸಾ-1 ಮತ್ತು 2 ಇವರ ಗಾಯದ ಪ್ರಮಾಣ ಪತ್ರ ಕೋರಿ ಮನವಿ ಸಲ್ಲಿಸಿರುತ್ತೇನೆ. ಚಾಸಾ-1 ಮತ್ತು ಆರೋಪಿತರ ಜಾತಿ ಪ್ರಮಾಣ ಪತ್ರ ನೀಡಲು ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು ಇವರಿಗೆ ಮನವಿ ಪತ್ರ ಸಲ್ಲಿಸಿರುತ್ತೇನೆ. ದಿಃ31.07.2016 ರಂದು ನನಗೆ ನಿವೃತ್ತಿಯಾದ ಕಾರಣ ನಾನು ಪ್ರಕರಣದ ಕಡತವನ್ನು ಚಾಸಾ-15 ರವರಿಗೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ 1 ರಿಂದ 3 ಮತ್ತು 5 ನೇ ಆರೋಪಿತರ ಪರ ಶ್ರೀ ಎಸ್ ಪಿ ವಕೀಲರಿಂದಃ</u>**

4. ನಿಪಿ-2 ಪಂಚನಾಮೆಯನ್ನು ನಮ್ಮ ಠಾಣೆಯ ರೈಟರ್ ಬರೆದಿರುತ್ತಾರೆ. ಸದರಿ ರೈಟರ್ ರವರ ಸಹಿಯನ್ನು ನಿಪಿ-2 ಪಂಚನಾಮೆ ಮೇಲೆ ಬರೆದಿಲ್ಲ. ಚಾಸಾ-4, 6 ಮತ್ತು 7 ಇವರುಗಳು ಸ್ಥಳದಲ್ಲಿದ್ದು ಅವರನ್ನು ಸಾಕ್ಷಿದಾರರಾಗಿ ಕೋರಿಕೊಂಡೆನು. ಚಾಸಾ-4, 6 ಮತ್ತು 7 ಇವರಿಗೆ ನಾನು ಲಿಖಿತ ನೋಟೀಸನ್ನು ನೀಡಿರುವುದಿಲ್ಲ. ಚಾಸಾ-4, 6 ಮತ್ತು 7 ಇವರು ಚಾಸಾ-1 ಇವರ ಜೊತೆಗೆ ಕೆಲಸ ಮಾಡುವವರು ಎಂದರೆ ನನಗೆ ಗೊತ್ತಿಲ್ಲ. ಮು.ಮಾ-1 ರಿಂದ 3 ದೊಣ್ಣೆಗಳು ಸಾಮಾನ್ಯವಾಗಿ ಬೇರೆ ಕಡೆ ಸಿಗುತ್ತದೆ ಎಂದರೆ ಸರಿಯಲ್ಲ. ಮು.ಮಾ-1 ರಿಂದ 3 ಇದರ ಮೇಲೆ ಇರುವ ಚೀಟಿಯಲ್ಲಿ ಪಂಚರ ಸಹಿಗಳನ್ನು ಪಡೆದಿಲ್ಲ. ನಾನು ನಿಪಿ-2 ಅನ್ನು ಸ್ಥಳದಲ್ಲಿ ಜರುಗಿಸದೇ ಠಾಣೆಯಲ್ಲಿಯೇ

ನಿಪಿ-2 ಅನ್ನು ಸುಳ್ಳು ಸೃಷ್ಟಿ ಮಾಡಿ ಚಾಸಾ-1 ಇವರು ಕರೆದುಕೊಂಡು ಬಂದ ಚಾಸಾ-4, 6 ಮತ್ತು 7 ಇವರ ಸಹಿಗಳನ್ನು ಠಾಣೆಯಲ್ಲಿಯೇ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ-1 ರಿಂದ 3 ಇವುಗಳನ್ನು ಈ ಪ್ರಕರಣಕ್ಕೋಸ್ಕರ ಸುಳ್ಳು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಡೆಯದೇ ಇರುವ ಘಟನೆಯನ್ನು ನಡೆದಿದೆ ಎಂದು ನಿಪಿ-2 ಪಂಚನಾಮೆಯನ್ನು ಸುಳ್ಳು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳವನ್ನು ನಾನು ನೋಡಿಯೇ ಇಲ್ಲ ಎಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರ ಮತ್ತು ಜಾತಿಯ ವರದಿ ಕೋರಿ ನಾನು ಮನವಿಗಳನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಬಿ ಎಂ ವಿ ವಕೀಲರಿಂದಃ**

4 ನೇ ಆರೋಪಿ ಪರ ವಕೀಲರು 1 ರಿಂದ 3 ಮತ್ತು 5 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನಿವೇದಿಸಿಕೊಂಡಿರುತ್ತಾರೆ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು